

بِسْمِ اللّٰہِ الرَّحْمٰنِ الرَّحِیم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 20–09–2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

اَشْهَدُ اَنْ لَّا اِلٰهَ اِلَّا اللّٰهُ وَحْدَهٗ لَا شَرِيْكَ لَهٗ وَ اَشْهَدُ اَنَّ مُحَمَّدًا عَبْدُهٗ وَ رَسُوْلُهٗ۔ اَمَّا بَعْدُ

فَاَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ ۙ الرَّحْمٰنِ الرَّحِيْمِ ۙ مٰلِكِ يَوْمِ الدِّيْنِ ؕ اِيَّاكَ نَعْبُدُ وَ اِيَّاكَ نَسْتَعِيْنُ ؕ

اِهْدِنَا الصِّرَاطَ الْمُسْتَقِيْمَ ۙ صِرَاطَ الَّذِيْنَ اَنْعَمْتَ عَلَيْهِمْ ۙ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۠

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ನಾನು ಪ್ರಸ್ತಾಪಿಸಲಿರುವ ಬದರಿ ಸಹಾಬರಲ್ಲಿ ಮೊದಲನೆಯವರ ಹೆಸರು ಹಝ್ರತ್ ಯಝೀದ್ ಬಿನ್ ರುಖೈಶ್(ರ). ಅವರು ಬದರ್, ಉಹುದ್, ಖಂದಕ್ ಮತ್ತು ಇತರ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಭಾಗವಹಿದ್ದರು. ಅವರು ಬದರ್ ಯುದ್ಧದಲ್ಲಿ ತೈ ಗೋತ್ರದ ಅಮರ್ ಬಿನ್ ಸುಫ್‌ಯಾನ್‌ನನ್ನು ಹತ್ಯೆ ಮಾಡಿದ್ದರು. ಅವರು ಹಿಜರಿ 12ರಲ್ಲಿ ಯಮಾಮ ಯುದ್ಧದಲ್ಲಿ ಭಾಗವಹಿಸಿ ಶಹೀದರಾದರು. ಯಮಾಮ ಯುದ್ಧದ ಬಗ್ಗೆ ವಿವರಣೆ ಹೀಗೆ:

ಹಝ್ರತ್ ಅಬೂಬಕರ್(ರ)ರವರ ಖಿಲಾಫತ್ ಕಾಲದಲ್ಲಿ ಹಿಜರಿ 11ರಲ್ಲಿ ಮುಸೈಲಿಮ ಕಝ್ಝಾಬ್ ವಿರುದ್ಧ ಯಮಾಮದಲ್ಲಿ ಯುದ್ಧ ನಡೆಯಿತು. ಹಝ್ರತ್ ಇಕ್ರಿಮ ಬಿನ್ ಅಬೂಜಹಲ್ ನೇತೃತ್ವದಲ್ಲಿ ಒಂದು ಸೈನ್ಯವನ್ನು ಮುಸೈಲಿಮನ ವಿರುದ್ಧ ಹೋರಾಡಲು ಹಝ್ರತ್ ಅಬೂಬಕರ್(ರ) ಕಳುಹಿಸಿದರು. ಅನಂತರ ಈ ಸೈನ್ಯಕ್ಕೆ ಬೆಂಬಲವಾಗಿ ಹಝ್ರತ್ ಶರ್‌ಹಬೀಲ್ ಬಿನ್ ಹಸನರ ನೇತೃತ್ವದಲ್ಲಿ ಒಂದು ಸೈನ್ಯವನ್ನು ಕಳುಹಿಸಲಾಯಿತು. ಆದರೆ ಈ ಸೈನ್ಯ ತಲಪುವ ಮೊದಲೇ ಹಝ್ರತ್ ಇಕ್ರಿಮರು ಮುಸೈಲಿಮನ ವಿರುದ್ಧ ಯುದ್ಧ ಪ್ರಾರಂಭಿಸಿದ್ದರು. ಅವರಿಗೆ ಮುಸೈಲಿಮನ ವಿರುದ್ಧ ಹೋರಾಡಿದಾಗ ಸೋಲು ಸಂಭವಿಸಿತು. ಈ ಸಂಭವದ ಬಗ್ಗೆ ಹಝ್ರತ್ ಶರ್‌ಹಬೀಲ್‌ರಿಗೆ ವರದಿ ತಲಪಿದಾಗ ಅವರು ಮಾರ್ಗ ಮಧ್ಯದಲ್ಲಿಯೇ ಶಿಬಿರ ಹೂಡಿದರು. ಹಝ್ರತ್ ಇಕ್ರಿಮ ತನ್ನ ಸೋಲಿನ ಬಗ್ಗೆ ಹಝ್ರತ್ ಅಬೂಬಕರ್(ರ)ರಿಗೆ ತಿಳಿಸಿದಾಗ ಹಝ್ರತ್ ಅಬೂಬಕರ್, ಹಝ್ರತ್ ಇಕ್ರಿಮರಿಗೆ ಬರೆದು ತಿಳಿಸಿದರು: ನೀವು ಮದೀನಕ್ಕೆ ಮರಳಬೇಡಿರಿ. ಏಕೆಂದರೆ ನೀವು ಮರಳಿ ಬಂದರೆ ಜನರಲ್ಲಿ ಹೇಡಿತನ ಉದ್ಭವಿಸುವುದು. ನೀವು ನಿಮ್ಮ ಸೈನ್ಯದೊಂದಿಗೆ ಉಮ್ಮಾನ್‌ಗೆ ಮತ್ತು ಮೆಹ್ರಾಗೆ ಹೋಗಿ ವಿದ್ರೋಹಿಗಳ ವಿರುದ್ಧ ಹೋರಾಡಿರಿ. ಅನಂತರ ಯಮನ್ ಮತ್ತು ಹಝ್ರ್‌ಮೌತ್‌ನಲ್ಲಿರುವ ವಿದ್ರೋಹಿಗಳ ವಿರುದ್ಧ ಹೋರಾಡಿರಿ. ಹಝ್ರತ್ ಅಬೂಬಕರ್(ರ) ಹಝ್ರತ್ ಶರ್‌ಹಬೀಲ್‌ರಿಗೆ ಬರೆದರು: ಖಾಲಿದ್ ಬಿನ್ ವಲೀದ್ ಅಲ್ಲಿಗೆ ಬರುವ ತನಕ ನೀವು ಅಲ್ಲಿಯೇ ಇರಿ. ಹಝ್ರತ್ ಅಬೂಬಕರ್, ಹಝ್ರತ್ ಖಾಲಿದರನ್ನು ಮುಸೈಲಿಮನ ವಿರುದ್ಧ ಹೋರಾಡಲು ಕಳುಹಿಸಿದರು. ಅವರ ಜೊತೆಗೆ ಮುಹಾಜಿರ್ ಮತ್ತು ಅನ್‌ಸಾರ್‌ಗಳ ದೊಡ್ಡ ಗುಂಪು ಇದ್ದಿತು. ಅನ್‌ಸಾರ್‌ಗಳ ಗುಂಪಿನ ನಾಯಕ ಹಝ್ರತ್ ಸಾಬಿತ್ ಬಿನ್ ಖೈಸ್ ಮತ್ತು ಮುಹಾಜಿರ್‌ಗಳಿಗೆ ನಾಯಕರಾಗಿ ಹಝ್ರತ್ ಅಬೂ ಹುಝೈಫ ಮತ್ತು ಝೈದ್ ಬಿನ್ ಖತ್ತಾಬ್ ಇದ್ದರು. ಹಝ್ರತ್ ಶರ್‌ಹಬೀಲರು ಹಝ್ರತ್ ಖಾಲಿದ್ ಆಗಮಿಸುವ ಮೊದಲೇ ಮುಸೈಲಿಮನ ವಿರುದ್ಧ ಯುದ್ಧ ಪ್ರಾರಂಭಿಸಿದರು ಮತ್ತು ಅದರಲ್ಲಿ ಸೋತು ಹೋದರು. ಹಝ್ರತ್ ಅಬೂಬಕರ್ ಹಝ್ರತ್ ಖಾಲಿದರಿಗೆ ಸಹಾಯ ಮಾಡಲು ಇನ್ನಷ್ಟು ಸೈನಿಕರನ್ನು ರವಾನಿಸಿದರು. ಯಾಕೆಂದರೆ ಹಿಂಭಾಗದಿಂದ ಯಾರೂ ಆಕ್ರಮಿಸದಿರಲಿ ಎಂದು. ಈ ಯುದ್ಧದಲ್ಲಿ ಮುಸ್ಲಿಮರ ಸೈನಿಕರ ಸಂಖ್ಯೆ ಹದಿಮೂರು ಸಾವಿರವಾಗಿತ್ತು. ಮುಸೈಲಿಮನ ಸೈನ್ಯ ನಲ್ವತ್ತು ಸಾವಿರ ಸೈನಿಕರನ್ನು ಹೊಂದಿತ್ತೆಂದು ಹೇಳಲಾಗುತ್ತಿದೆ. ಹಝ್ರತ್ ಖಾಲಿದ್ ಸೈನ್ಯದೊಂದಿಗೆ ಆಗಮಿಸಿದ ಸಮಾಚಾರ ತಿಳಿದಾಗ ಮುಸೈಲಿಮ ಅಖ್‌ರಬಾ ಎಂಬಲ್ಲಿ ಸೇನಾ ವ್ಯೂಹ ರಚಿಸಿ ಜನರನ್ನು ತನ್ನ ಸಹಾಯಕ್ಕಾಗಿ ಆಮಂತ್ರಿಸಿದನು. ಜನರು ಬಹಳ ಸಂಖ್ಯೆಯಲ್ಲಿ ಅವನ ಬಳಿಗೆ ಆಗಮಿಸಿದರು. ಆ ಮಧ್ಯೆ ಮುಜಾಅ ಬಿನ್ ಮುರಾರ ಜನರ ಒಂದು ಗುಂಪಿನೊಂದಿಗೆ ಹೊರಗೆ ಬಂದಾಗ ಮುಸ್ಲಿಮರು ಅವನನ್ನೂ ಅವನ ಗುಂಪಿನ ಜನರನ್ನೂ ಹಿಡಿಗೂಡಿದರು. ಹಝ್ರತ್ ಖಾಲಿದ್ ಮುಜಾಆನನ್ನು ಹೊರತು ಪಡಿಸಿ ಅವನ ಸಂಗಡಿಗರನ್ನು ಹತ್ಯೆ ಮಾಡಿದರು. ಏಕೆಂದರೆ ಬನೂ ಹನೀಫ ಗೋತ್ರದಲ್ಲಿ ಅವನಿಗೆ ಬಹಳ ಗೌರವ ಇತ್ತು. ಮುಸೈಲಿಮನ ಪುತ್ರ ಶರ್‌ಹಬೀಲ್ ಬನೂ ಹನೀಫ ಗೋತ್ರದವರನ್ನು ಉದ್ರೇಕಿಸಿ ಈರೀತಿ ಹೇಳಿದನು: 'ಇಂದು ಅಭಿಮಾನ ಪ್ರಕಟಿಸುವ ದಿನವಾಗಿದೆ. ನೀವು ಇಂದು ಸೋತರೆ ನಿಮ್ಮ ಹೆಂಗಸರು ದಾಸಿಯರಾಗಿ ಮಾಡಲ್ಪಡುವರು. ಆದುದರಿಂದ ನೀವು ನಿಮ್ಮ ಗೌರವ ಕಾಪಾಡಲು ಶೌರ್ಯ ಪ್ರದರ್ಶಿಸಿರಿ. ನಿಮ್ಮ ಹೆಂಗಸರನ್ನು ಸಂರಕ್ಷಿಸಿರಿ.' ಹಾಗೆ ಯುದ್ಧ ಪ್ರಾರಂಭವಾಯಿತು. ಮುಹಾಜಿರ್‌ಗಳ ಪತಾಕೆ ಹಝ್ರತ್ ಸಾಲಿಮ್ ಮೌಲಾ ಹುಝೈಫರ ಕೈಯ್ಯಲ್ಲಿತ್ತು. ಅದರ ಮೊದಲು ಅದು ಅಬ್ದುಲ್ಲಾ ಬಿನ್ ಹಫ್‌ಸ್‌ರ ಕೈಯ್ಯಲ್ಲಿತ್ತು. ಆದರೆ ಅವರು ಶಹೀದರಾದರು. ಅನ್‌ಸಾರ್‌ಗಳ ಪತಾಕೆ ಹಝ್ರತ್ ಸಾಬಿತ್ ಬಿನ್ ಖೈಸ್ ಬಳಿ ಇತ್ತು. ಘೋರ ಯುದ್ಧ ನಡೆಯಿತು. ಅದು ಹೇಗಿತ್ತೆಂದರೆ ಅದಕ್ಕೆ ಮೊದಲು ಮುಸ್ಲಿಮರು ಅಂತಹ ಯುದ್ಧವನ್ನು ಎದುರಿಸಿರಲಿಲ್ಲ. ಈ ಯುದ್ಧದಲ್ಲಿ ಮುಸ್ಲಿಮರು ಸೋತರು. ಬನೂ ಹನೀಫ ಗೋತ್ರದ ಜನರು ಹಝ್ರತ್ ಖಾಲಿದ್‌ರಿಂದ ಬಂಧಿಸಲ್ಪಟ್ಟಿದ್ದ ಮುಜಾಆನನ್ನು ಬಿಡಿಸಲು ಬಂದರು. ಅವರು ಹಝ್ರತ್ ಖಾಲಿದ್ ಬಿನ್ ವಲೀದರ ಡೇರೆಗೆ ಬಂದರು. ಅಲ್ಲಿ ಹಝ್ರತ್ ಖಾಲಿದರ ಪತ್ನಿ ಇದ್ದರು.

ಅವರು ಹಝ್ರತ್ ಖಾಲಿದರ ಪತ್ನಿಯನ್ನು ಕೊಲ್ಲಲು ಮುಂದುವರಿದಾಗ ಮುಜಾಅ ಹೇಳಿದನು: ನಾನು ಆಕೆಗೆ ಅಭಯ ನೀಡಿದ್ದೇನೆ. ಆಕೆಯನ್ನು ಕೊಲ್ಲಬೇಡಿರಿ. ಮುಜಾಅ ತನ್ನ ಜನರೊಂದಿಗೆ ಪುರುಷರನ್ನು ಆಕ್ರಮಿಸಲು ಹೇಳಿದನು. ಆಗ ಅವರು ಡೇರೆಯನ್ನು ಮುರಿದು ಹಾಕಿ ಅಲ್ಲಿಂದ ಹೋದರು. ಯುದ್ಧ ಪುನಃ ಪ್ರಾರಂಭವಾಯಿತು. ಬನೂ ಹನೀಫ ಗೋತ್ರದ ಜನರು ಸೇರಿ ತೀವ್ರವಾಗಿ ಆಕ್ರಮಣ ಮಾಡಿದರು. ಆ ದಿನ ಕೆಲವು ಸಾರಿ ಮುಸ್ಲಿಮರು ಮೇಲುಗೈ ಸಾಧಿಸುತ್ತಿದ್ದರು ಮತ್ತೆ ಕೆಲವು ಸಾರಿ ಅವಿಶ್ವಾಸಿಗಳು. ಆ ಯುದ್ಧದಲ್ಲಿ ಹಝ್ರತ್ ಸಾಲಿಮ್, ಹಝ್ರತ್ ಅಬೂ ಹುದೈಫ, ಹಝ್ರತ್ ಝೈದ್ ಬಿನ್ ಖತ್ತಾಬ್ ಮೊದಲಾದ ಹಿರಿಯ ಸಹಾಬರು ಶಹೀದರಾದರು. ಹಝ್ರತ್ ಖಾಲಿದ್ ಮುಸ್ಲಿಮರ ಈ ದುರವಸ್ಥೆಯನ್ನು ಕಂಡಾಗ ಪ್ರತಿಯೊಂದು ಗೋತ್ರದ ಜನರು ಬೇರೆ ಬೇರೆಯಾಗಿ ನಿಲ್ಲುವಂತೆ ಆಜ್ಞಾಪಿಸಿದರು. ಆ ಮೂಲಕ ಅವರು ಮುಸ್ಲಿಮರಿಗೆ ಉಂಟಾದ ಹಾನಿಯನ್ನು ಅಂದಾಜು ಮಾಡಲು ಮತ್ತು ಎಲ್ಲಿಂದೆಲ್ಲಾ ಆಕ್ರಮಣಗಳು ನಡೆಯುತ್ತಿವೆ ಎಂದು ತಿಳಿಯಲು ಪ್ರಯತ್ನಿಸಿದ್ದರು. ಈ ರೀತಿ ಅವರು ಸೈನಿಕರ ಸಾಲುಗಳನ್ನು ಸರಿಪಡಿಸಿದರು. ಆಗ ಮುಸ್ಲಿಮರು ಪರಸ್ಪರ ಹೇಳಿದರು: ಇಂದು ನಮಗೆ ನಾಚಿಕೆಯಾಗುತ್ತಿದೆ. ಎಂದರೆ ನಮ್ಮ ಈಗಿನ ಸ್ಥಿತಿ ಬಹಳ ನಾಚಿಕೆಗೇಡಿನದಾಗಿದೆ. ಮುಸ್ಲಿಮರಿಗೆ ಇದಕ್ಕಿಂತ ಹೆಚ್ಚು ಕಷ್ಟದಾಯಕ ದಿನ ಬೇರೆ ಇರಲಿಲ್ಲ.

ಮುಸೈಲಿಮ ತನ್ನ ಸ್ಥಳದಲ್ಲಿ ಸ್ಥಿರವಾಗಿ ನಿಂತಿದ್ದನು. ಆತ ಅವಿಶ್ವಾಸಿಗಳ ಯುದ್ಧದ ಕೇಂದ್ರವಾಗಿದ್ದನು. ಮುಸೈಲಿಮನು ಹತನಾಗುವ ತನಕ ಯುದ್ಧ ಮುಂದುವರಿಯುವುದೆಂದು ಹಝ್ರತ್ ಖಾಲಿದ್ ಮನವರಿಕೆ ಮಾಡಿದರು. ಅವರು ಮುಂದೆ ಸಾಗಿ ಯುದ್ಧ ಘೋಷಣೆ ಮಾಡಿದರು. "ಯಾ ಮುಹಮ್ಮದ್" ಎಂಬ ಸಮರ ಧ್ವನಿ ಹೊರಡಿಸಿದರು. ಯುದ್ಧ ಕ್ಷೇತ್ರಕ್ಕೆ ಬಂದವರೆಲ್ಲಾ ಹತರಾದರು. ಹಝ್ರತ್ ಖಾಲಿದ್ ಮುಸೈಲಿಮನನ್ನು ತನ್ನೆದುರಿಗೆ ಬರಲು ಕರೆದರು. ಆದರೆ ಅವನು ಮುಂದೆ ಬರಲಿಲ್ಲ. ಅವನು ಓಡಿ ಹೋದನು. ಅವನು ತನ್ನ ಸಂಗಡಿಗರ ಜೊತೆಗೆ ತನ್ನ ತೋಟದಲ್ಲಿ ಆಶ್ರಯ ಪಡೆದನು. ತೋಟದ ದ್ವಾರ ಮುಚ್ಚಲಾಗಿತ್ತು. ಮುಸ್ಲಿಮರು ಆ ತೋಟಕ್ಕೆ ಮುತ್ತಿಗೆ ಹಾಕಿದರು. ಅವರು ಒಂದು ಉಪಾಯದಿಂದ ಬಾಗಿಲು ತೆರೆದು ತೋಟದೊಳಗೆ ಪ್ರವೇಶಿಸಿದರು. ಆಗ ಅಲ್ಲಿ ಘೋರ ಯುದ್ಧ ನಡೆಯಿತು. ವಹ್‌ಶೀ ಎಂಬವರು ಮುಸೈಲಿಮನನ್ನು ಹತ್ಯೆ ಮಾಡಿದರು. ಈ ವಹ್‌ಶೀ ಹಿಂದೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರರ ಚಿಕ್ಕಪ್ಪ ಹಮ್ಝರನ್ನು ಹತ್ಯೆ ಮಾಡಿದ ವ್ಯಕ್ತಿಯಾಗಿದ್ದಾರೆ. ಯಮಾಮ ಯುದ್ಧದಲ್ಲಿ ಮುಹಾಜಿರ್ ಮತ್ತು ಅನ್‌ಸಾರ್‌ಗಳಾದ ಆರು ನೂರಕ್ಕಿಂತ ಹೆಚ್ಚು ಮುಸ್ಲಿಮರು ಹತರಾದರು. ಅದೇ ರೀತಿ ಬನೂ ಹನೀಫ ಗೋತ್ರದ ಏಳು ಸಾವಿರ ಅವಿಶ್ವಾಸಿಗಳು ಅಖ್‌ರಬಾ ರಣಾಂಗಣದಲ್ಲಿಯೂ ಏಳು ಸಾವಿರ ಅವಿಶ್ವಾಸಿಗಳು ತೋಟದಲ್ಲಿಯೂ ಮತ್ತು ಓಡಿ ಹೋಗುವವರನ್ನು ಹಿಂಬಾಲಿಸಿದಾಗ ಏಳು ಸಾವಿರ ಅವಿಶ್ವಾಸಿಗಳೂ ಹತರಾದರು.

ಇನ್ನು ಪ್ರಸ್ತಾಪಿಸಲಿರುವ ಸಹಾಬಿಯ ಹೆಸರು ಹಝ್ರತ್ ಅಬ್ದುಲ್ಲಾ ಬಿನ್ ಮುಖ್‌ರಮ(ರ). ಆರಂಭ ಕಾಲದಲ್ಲಿ ಮುಸ್ಲಿಮರಾದವರಲ್ಲಿ ಅವರು ಸೇರಿದ್ದರು. ಅವರು ಎರಡು ಹಿಜ್‌ರತ್ ಮಾಡಿದ್ದರು. ಒಂದು ಅಬಿಸೀನಿಯಾ ಕಡೆಗೆ ಇನ್ನೊಂದು ಮದೀನಕ್ಕೆ. ಅವರು ಬದರ್ ಮತ್ತು ಇತರ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಬದರ್ ಯುದ್ಧದ ಸಮಯ ಅವರ ಪ್ರಾಯ ಮೂವತ್ತು ವರ್ಷ. ಅವರು ಯಮಾಮ ಯುದ್ಧದಲ್ಲಿ ಶಹೀದರಾದರು. ಆಗ ಅವರ ಪ್ರಾಯ ನಲ್ವತ್ತೊಂದು ಆಗಿತ್ತು. ಹಝ್ರತ್ ಅಬ್ದುಲ್ಲಾ ಬಿನ್ ಮುಖ್‌ರಮರಿಗೆ ಶಹಾದತ್ ಗಳಿಸುವ ಬಗ್ಗೆ ಬಹಳ ಉತ್ಸಾಹವಿತ್ತು. ಅವರು ಅಲ್ಲಾಹನೊಂದಿಗೆ ಹೀಗೆ ಪ್ರಾರ್ಥಿಸುತ್ತಿದ್ದರು: ನನ್ನ ಶರೀರದ ಪ್ರತಿಯೊಂದು ಕೀಲು, ಸಂಧಿಗಳಲ್ಲಿ ಅಲ್ಲಾಹನ ಮಾರ್ಗದಲ್ಲಿ ಹೋರಾಡಿ ಗಾಯಗಳನ್ನು ಹೊಂದಿರುವುದನ್ನು ಕಾಣುವ ತನಕ ನಾನು ಮೃತನಾಗಬಾರದು. ಯಮಾಮ ಯುದ್ಧದಲ್ಲಿ ಅವರ ಶರೀರದ ಕೀಲು ಸಂಧಿಗಳಲ್ಲಿ ಗಾಯಗಳಾಗಿದ್ದ ಕಾರಣ ಅವರು ಶಹೀದರಾದರು. ಅವರು ಬಹಳ ಆರಾಧನೆ ಮಾಡುವವರಾಗಿದ್ದರು. ಯೌವ್ವನ ಕಾಲದಲ್ಲಿಯೂ ಬಹಳ ಆರಾಧನೆ ಮಾಡುತ್ತಿದ್ದರು. ಹಝ್ರತ್ ಇಬ್ನು ಉಮರ್ ಹೇಳುತ್ತಾರೆ: ಯಮಾಮ ಯುದ್ಧದ ಕಾಲದಲ್ಲಿ ಹಝ್ರತ್ ಅಬ್ದುಲ್ಲಾ ಬಿನ್ ಮುಖ್‌ರಮ, ಹಝ್ರತ್ ಅಬೂ ಹುದೈಫ ವಿಮೋಚಿಸಿದ ಗುಲಾಮರಾಗಿದ್ದ ಹಝ್ರತ್ ಸಾಲಿಮ್ ಮತ್ತು ನಾನು ಒಟ್ಟಿಗೆ ಇದ್ದೆವು. ನಾವು ಮೂವರೂ ಒಬ್ಬರ ನಂತರ ಇನ್ನೊಬ್ಬರಂತೆ ಸೈನ್ಯಕ್ಕೋಸ್ಕರ ಆಡುಗಳನ್ನು ಮೇಯಿಸುತ್ತಿದ್ದೆವು. ಯುದ್ಧ ಪ್ರಾರಂಭವಾದ ದಿನ ನಾನು ಆಡುಗಳನ್ನು ಮೇಯಿಸುವ ದಿನವಾಗಿತ್ತು. ನಾನು ಆಡುಗಳನ್ನು ಮೇಯಿಸಿದ ನಂತರ ಮರಳಿ ಬಂದಾಗ ಹಝ್ರತ್ ಅಬ್ದುಲ್ಲಾ ಬಿನ್ ಮುಖ್‌ರಮರನ್ನು ಗಾಯಗೊಂಡು ರಣಾಂಗಣದಲ್ಲಿ ಬಿದ್ದಿರುವುದಾಗಿ ಕಂಡೆನು. ಆಗ ನಾನು ಅವರ ಬಳಿ ನಿಂತೆನು. ಅವರು ಹೇಳಿದರು: ಓ ಅಬ್ದುಲ್ಲಾ ಬಿನ್ ಉಮರ್, ಉಪವಾಸ ಮಾಡಿದವರು ಇಫ್ತಾರ್ ಮಾಡಿದರೇ? ನಾನು ಹೇಳಿದೆ: ಅವರು ಇಫ್ತಾರ್ ಮಾಡಿದರು. ಅವರು ಹೇಳಿದರು: ನೀನು ಸ್ವಲ್ಪ ನೀರು ತಂದು ಕೊಡು. ನಾನು ಉಪವಾಸ ಇಫ್ತಾರ್ ಮಾಡುವೆನು. ಹಝ್ರತ್ ಅಬ್ದುಲ್ಲಾ ಬಿನ್ ಉಮರ್ ಹೇಳುತ್ತಾರೆ: ನಾನು ನೀರು ತರಲು ಹೋಗಿ ಮರಳಿ ಬಂದಾಗ ಅವರು ಮೃತರಾಗಿದ್ದರು.

ಇನ್ನೊಬ್ಬ ಸಹಾಬಿಯ ಹೆಸರು ಹಝ್ರತ್ ಅಮರ್ ಬಿನ್ ಮಅ್‌ಬದ್(ರ). ಅವರು ಅನ್‌ಸಾರ್‌ಗಳ ಔಸ್ ಗೋತ್ರದ ಬನೂ ಸಬಾಯಾ ಶಾಖೆಗೆ ಸೇರಿದವರಾಗಿದ್ದರು. ಅವರು ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದರು. ಅವರು ಹುನೈನ್ ಯುದ್ಧದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ನಿಂತು ಹೋರಾಡಿದ ನೂರು ಸಹಾಬರಲ್ಲಿ ಸೇರಿದ್ದರು.

ಇನ್ನೊಬ್ಬ ಬದರಿ ಸಹಾಬಿ ಹಝ್ರತ್ ನುಅ್‌ಮಾನ್ ಬಿನ್ ಮಾಲಿಕ್(ರ). ಅವರನ್ನು ನುಅ್‌ಮಾನ್ ಬಿನ್ ಖೌಖಲ್ ಎಂದು ಸಹ ಕರೆಯುತ್ತಿದ್ದರು. ಅವರು ನಡೆಯುವಾಗ ಕುಂಟುತ್ತಿದ್ದರು. ಅವರು ಅನ್‌ಸಾರ್‌ಗಳ ಖಝ್‌ರಜ್ ಗೋತ್ರದ ಬನೂ ಗನಮ್ ಶಾಖೆಗೆ ಸೇರಿದ್ದರು. ಅವರು ಬದರ್, ಉಹುದ್‌ಗಳಲ್ಲಿ ಭಾಗವಹಿಸಿ ಉಹುದ್ ಯುದ್ಧದಲ್ಲಿ ಶಹೀದರಾದರು. ಅವರನ್ನು ಸಫ್‌ವಾನ್ ಬಿನ್ ಉಮಯ್ಯ ಶಹೀದರನ್ನಾಗಿ ಮಾಡಿದನು. ಹಝ್ರತ್ ನುಅ್‌ಮಾನ್ ಬಿನ್ ಮಾಲಿಕ್ ಉಹುದ್ ಯುದ್ಧಕ್ಕೆ ಹೊರಡುವಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ

ವಸಲ್ಲಮರೊಂದಿಗೆ ಹೇಳಿದರು: ಓ ಅಲ್ಲಾಹನ ರಸೂಲರೇ, ಅಲ್ಲಾಹನಾಣೆ ನಿಶ್ಚಯವಾಗಿ ನಾನು ಸ್ವರ್ಗಕ್ಕೆ ಪ್ರವೇಶಿಸುವೆನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ಅದು ಹೇಗೆ? ಹಝ್ರತ್ ನುಅ್‌ಮಾನ್ ಹೇಳಿದರು: ಯಾಕೆಂದರೆ, ನಾನು ಸಾಕ್ಷ್ಯ ಹೇಳುತ್ತೇನೆ– ಅಲ್ಲಾಹನ ಹೊರತು ಬೇರೆ ಆರಾಧ್ಯನಿಲ್ಲ ಮತ್ತು ತಾವು (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಅಲ್ಲಾಹನ ರಸೂಲರೆಂದು. ನಾನು ಯುದ್ಧದಿಂದ ಖಂಡಿತವಾಗಿಯೂ ಓಡಿ ಹೋಗಲಾರೆ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನೀವು ಸತ್ಯ ಹೇಳಿರುವಿರಿ. ಆ ಯುದ್ಧದಲ್ಲಿ ಹಝ್ರತ್ ನುಅ್‌ಮಾನ್ ಅದೇ ದಿನ ಶಹೀದರಾದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅಲ್ಲಾಹನು ಅವರ ಪ್ರಾರ್ಥನೆ ಅಂಗೀಕರಿಸಿರುವನು. ಏಕೆಂದರೆ ನಾನು ಸ್ವಪ್ನದಲ್ಲಿ ಕಂಡೆನು. ಅವರು ಸ್ವರ್ಗದಲ್ಲಿ ನಡೆಯುತ್ತಿದ್ದಾರೆ. ಅವರ ನಡಿಗೆಯಲ್ಲಿ ಯಾವುದೇ ಅಂಗವಿಕಲತೆ ಇರಲಿಲ್ಲ. ಹಝ್ರತ್ ಜಾಬಿರ್ ವರದಿ ಮಾಡುತ್ತಾರೆ: ಒಮ್ಮೆ ಹಝ್ರತ್ ನುಅ್‌ಮಾನ್ ಬಿನ್ ಖೌಖಲ್ ಮಸ್‌ಜಿದ್‌ಗೆ ಪ್ರವೇಶಿಸುವಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಜುಮುಅ ಖುತ್‌ಬ ನೀಡುತ್ತಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವರೊಂದಿಗೆ ಹೇಳಿದರು: ಓ ನುಅ್‌ಮಾನ್ ಎರಡು ರಕಅತ್ ನಮಾಝ್ ಅನುಷ್ಠಿಸು. ಅವು ಹ್ರಸ್ವವಾಗಿರಲಿ. ಅನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಇಮಾಮ್ ಖುತ್‌ಬ ನೀಡುವಾಗ ಯಾರಾದರೂ ಮಸ್‌ಜಿದ್‌ಗೆ ಪ್ರವೇಶಿಸಿದರೆ ಅವರು ಎರಡು ರಕಅತ್ ನಮಾಝ್ ನಿರ್ವಹಿಸಬೇಕು. ಅವು ಹ್ರಸ್ವವಾಗಿರಬೇಕು.

ಇನ್ನೊಬ್ಬ ಸಹಾಬಿ ಹಝ್ರತ್ ಖುಬೈಬ್ ಬಿನ್ ಅದೀ ಅನ್‌ಸಾರಿ(ರ). ಅವರು ಬದರ್ ಯುದ್ಧದಲ್ಲಿ ಭಾಗವಹಿಸಿ ಹಾರಿಸ್ ಬಿನ್ ಆಮಿರ್‌ನನ್ನು ಹತ್ಯೆ ಮಾಡಿದ್ದರು. ಬದರ್ ಯುದ್ಧದ ಸಂದರ್ಭದಲ್ಲಿ ಹೋರಾಟಗಾರರ ಸಾಮಗ್ರಿಗಳ ಸಂರಕ್ಷಣೆ ಅವರ ಹೊಣೆಗಾರಿಕೆಯಾಗಿತ್ತು. ಅವರು ಹಿಜರಿ ವರ್ಷ 4ರ ರಜೀಅ್ ಘಟನೆಯಲ್ಲಿ ಭಾಗವಹಿಸಿದ್ದರು. ರಜೀಅ್ ಘಟನೆಯ ಕುರಿತು ಬುಖಾರಿಯ ಹದೀಸು ಗ್ರಂಥದಲ್ಲಿ ಹೀಗೆ ವಿವರಿಸಲಾಗಿದೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹತ್ತು ಜನರ ಒಂದು ತಂಡವನ್ನು ಶತ್ರುಗಳ ಮಾಹಿತಿ ಸಂಗ್ರಹಿಸಲು ಕಳುಹಿಸಿದರು. ಆಸಿಮ್ ಬಿನ್ ಸಾಬಿತ್ ಅನ್‌ಸಾರಿಯನ್ನು ಅವರ ಅಮೀರರನ್ನಾಗಿ ನೇಮಿಸಿದ್ದರು. ಈ ಜನರು ಬಹ್‌ದಾ ಎಂಬಲ್ಲಿಗೆ ತಲಪಿದಾಗ ಅವರ ಬಗ್ಗೆ ಯಾರೋ ಒಬ್ಬ ಬನೂ ಲಹ್‌ಯಾನ್ ಗೋತ್ರದ ಜನರಿಗೆ ಸಮಾಚಾರ ನೀಡಿದನು. ಆಗ ಬನೂ ಲಹ್‌ಯಾನ್ ಗೋತ್ರದ ಇನ್ನೂರು ಜನರು ಬಿಲ್ಲು ಬಾಣ ಸುಸಜ್ಜಿತರಾಗಿ ಹೊರಟು ಆ ಹತ್ತು ಜನರ ಹೆಜ್ಜೆ ಗುರುತುಗಳನ್ನು ನೋಡುತ್ತಾ ಅವರನ್ನು ಹಿಂಬಾಲಿಸಿದರು. ಆಸಿಮ್ ಮತ್ತು ಅವರ ಸಂಗಡಿಗರು ಆ ಜನರನ್ನು ದೂರದಿಂದ ನೋಡಿದಾಗ ಒಂದು ಬೆಟ್ಟದ ಮೇಲೇರಿದರು. ಶತ್ರುಗಳು ಅವರನ್ನು ಸುತ್ತುವರಿದರು. ಅವರು ಹೇಳಿದರು: ನೀವು ಕೆಳಗೆ ಬನ್ನಿರಿ ನಾವು ನಿಮ್ಮನ್ನು ಕೊಲ್ಲಲಾರೆವು. ಆಸಿಮ್ ಬಿನ್ ಸಾಬಿತ್ ಹೇಳಿದರು: ಅವಿಶ್ವಾಸಿಗಳು ರಕ್ಷಣೆ ನೀಡುವ ಭರವಸೆಯಿಂದ ನಾವು ಇಳಿದು ಬರಲಾರೆವು. ಅವರು ಪ್ರಾರ್ಥಿಸಿದರು, ಓ ಅಲ್ಲಾಹ್, ನಿನ್ನ ಪ್ರವಾದಿಗೆ ನಮ್ಮ ಬಗ್ಗೆ ಸಮಾಚಾರ ನೀಡು. ಆಗ ಶತ್ರುಗಳು ಬಾಣಹೂಡಿ ಆಸಿಮ್ ಸಹಿತ ಏಳು ಜನರನ್ನು ಹತ್ಯೆ ಮಾಡಿದರು. ಉಳಿದ ಮೂವರು ಬೆಟ್ಟದಿಂದ ಇಳಿದು ಬಂದರು. ಆ ಮೂವರಲ್ಲಿ ಖುಬೈಬ್ ಅನ್‌ಸಾರಿ, ಇಬ್ನು ದಸ್ನ ಮತ್ತು ಇನ್ನೊಬ್ಬರಿದ್ದರು. ಕೆಳಗೆ ಇಳಿದು ಬಂದಾಗ ಅವಿಶ್ವಾಸಿಗಳು ಅವರನ್ನು ಹಗ್ಗದಿಂದ ಕಟ್ಟುವಾಗ ಮೂರನೆಯ ವ್ಯಕ್ತಿ ಹೇಳಿದರು: ಇದು ಪ್ರಥಮ ವಂಚನೆಯಾಗಿದೆ. ಅಲ್ಲಾಹನಾಣೆ ನಾನು ನಿಮ್ಮ ಜೊತೆಗೆ ಬರಲಾರೆ. ಶಹೀದರಾದವರ ಸಾಂತ್ವನ ಭರಿತ ಉದಾಹರಣೆ ನನಗೆ ಸಾಕು. ಶತ್ರುಗಳನ್ನು ಆ ವ್ಯಕ್ತಿಯನ್ನು ಎಳೆದಾಡಿದರು. ತಮ್ಮ ಜೊತೆ ಹೊರಡಲು ಬಲಾತ್ಕಾರ ಮಾಡಿದರು. ಆದರೆ ಆ ವ್ಯಕ್ತಿ ಒಪ್ಪದ ಕಾರಣ ಶತ್ರುಗಳು ಅವರನ್ನು ಹತ್ಯೆ ಮಾಡಿದರು. ಖುಬೈಬ್ ಮತ್ತು ಇಬ್ನು ದಸ್ನರನ್ನು ಮಕ್ಕಕ್ಕೆ ಕರೆದುಕೊಂಡು ಹೋಗಿ ಗುಲಾಮರನ್ನಾಗಿ ಮಾರಾಟ ಮಾಡಿದರು. ಖುಬೈಬ್‌ರನ್ನು ಬನೂ ಹಾರಿಸ್ ಬಿನ್ ಅಮರ್ ಬಿನ್ ನೌಫಲ್ ಬಿನ್ ಅಬ್ದುಮನಾಫ್ ಖರೀದಿಸಿದನು. ಖುಬೈಬ್ ಅಲ್ಲಿ ಬಂಧಿತನಾಗಿದ್ದರು. ಹಾರಿಸನ ಪುತ್ರಿ ಹೇಳುತ್ತಾಳೆ: ಬಂಧಿತನಾಗಿದ್ದಾಗ ಒಂದು ದಿನ ಖುಬೈಬ್ ಅವಳಿಂದ ಬಾಚಣಿಗೆ ಕೇಳಿದರು. ಅವರಿಗೆ ಬಾಚಣಿಗೆ ಕೊಡಲಾಯಿತು. ಆಕೆ ಹೇಳುತ್ತಾಳೆ: ನನ್ನ ಅಜಾಗರೂಕತೆಯಿಂದ ನನ್ನ ಒಂದು ಮಗು ಖುಬೈಬ್ ಬಳಿಗೆ ಹೋಯಿತು. ಆಗ ಖುಬೈಬ್ ಆ ಮಗುವನ್ನು ತೊಡೆಯಲ್ಲಿ ಕುಳ್ಳಿರಿಸಿದರು. ಆಗ ನಾನು ಬಹಳ ಗಾಬರಿಗೊಂಡೆ. ಖುಬೈಬ್ ನನ್ನ ಗಾಬರಿಯನ್ನು ನನ್ನ ಮುಖ ನೋಡಿ ತಿಳಿದುಕೊಂಡರು. ಅವರು ಹೇಳಿದರು: ನಾನು ಮಗುವನ್ನು ಕೊಲ್ಲುವೆನು ಎಂದು ನೀನು ಹೆದರುವಿಯೋ? ನಾನು ಅಂತಹ ಕೆಲಸ ಮಾಡುವವನಲ್ಲ.

ಹಾರಿಸನ ಪುತ್ರಿ ಹೇಳುತ್ತಾಳೆ: ಖುಬೈಬ್‌ಗಿಂತ ಉತ್ತಮನಾದ ಯಾವ ಸೆರೆಯಾಳನ್ನೂ ನಾನು ಇದುವರೆಗೂ ಕಂಡಿಲ್ಲ. ಅಲ್ಲಾಹನಾಣೆ, ನಾನು ಒಂದು ದಿವಸ ಹೀಗೆ ಕಂಡೆನು: ಖುಬೈಬ್ ದ್ರಾಕ್ಷೆಯ ಗೊಂಚಲು ಅವರ ಕೈಯಲ್ಲಿತ್ತು. ಅವರು ಅದರಿಂದ ದ್ರಾಕ್ಷೆ ತಿನ್ನುತ್ತಿದ್ದರು. ಅವರು ಸಂಕೋಲೆಗಳಲ್ಲಿ ಬಂಧಿತರಾಗಿದ್ದರು. ಅದು ದ್ರಾಕ್ಷೆ ಹಣ್ಣು ಸಿಗುವ ಕಾಲವೂ ಆಗಿರಲಿಲ್ಲ. ಅದು ಖುಬೈಬ್‌ರಿಗೆ ಅಲ್ಲಾಹನೇ ನೀಡಿದ ಆಹಾರವಾಗಿತ್ತು.

ಖುಬೈಬರನ್ನು ಕೊಲ್ಲಲು ಜನರು ಅವರನ್ನು ಹರಮ್ ಪ್ರದೇಶದಿಂದ ಹೊರಗೆ ಕರೆದುಕೊಂಡು ಹೋದಾಗ ಅವರು ಹೇಳಿದರು: ನನಗೆ ಎರಡು ರಕಅತ್ ನಮಾಝ್ ನಿರ್ವಹಿಸುವ ಅನುಮತಿ ನೀಡಿರಿ. ಅವರಿಗೆ ಅನುಮತಿ ನೀಡಲಾಯಿತು. ಹಝ್ರತ್ ಖುಬೈಬ್ ಅಲ್ಲಾಹನೊಂದಿಗೆ ಪ್ರಾರ್ಥಿಸುತ್ತಾ ಹೇಳಿದರು: ನೀನು ಅವರನ್ನು ಒಬ್ಬೊಬ್ಬರನ್ನಾಗಿ ನಾಶಪಡಿಸು. ಅವರು ಅನಂತರ ಒಂದು ಪದ್ಯ ಹೇಳಿದರು: ಅದರ ಅರ್ಥ ಹೀಗೆ: 'ನಾನು ಮುಸ್ಲಿಮನಾಗಿರುವ ಸ್ಥಿತಿಯಲ್ಲಿ ಕೊಲ್ಲಲ್ಪಡುವಾಗ ನಾನು ಯಾವ ಬದಿಯಲ್ಲಿ ಬಿದ್ದು ಬಿಡುವೆನು ಎಂಬುದರ ಬಗ್ಗೆ ನನಗೆ ಚಿಂತೆ ಇಲ್ಲ. ನನ್ನ ಈ ಬೀಳುವಿಕೆ ಅಲ್ಲಾಹನಿಗೋಸ್ಕರವಾಗಿದೆ. ಅವನು ಇಚ್ಛಿಸುವುದಾದರೆ ತುಂಡರಿಸಲ್ಪಟ್ಟ ಈ ದೇಹಗಳ ಕೀಲುಗಳಿಗೆ ಅನುಗ್ರಹ ದಯಪಾಲಿಸುವನು.' ಕೊನೆಗೆ ಹಾರಿಸನ ಪುತ್ರ ಉಖ್‌ಬಾ

ಹಝ್ರತ್ ಖುಬೈಬರನ್ನು ಶಹೀದರನ್ನಾಗಿ ಮಾಡಿದನು. ಬಂಧಿಸಲ್ಪಟ್ಟು ಕೊಲ್ಲಲ್ಪಡುವ ಮುಸ್ಲಿಮರು ತಮ್ಮ ಹತ್ಯೆಗೆ ಮೊದಲು ಎರಡು ರಕಅತ್ ನಮಾಝ್ ನಿರ್ವಹಿಸುವ ನಡೆವಳಿಕೆಯನ್ನು ಪ್ರಾರಂಭಿಸಿದವರು ಹಝ್ರತ್ ಖುಬೈಬರೇ ಆಗಿದ್ದಾರೆ.

ಹಝ್ರತ್ ಖುಬೈಬ್ ಶಹೀದರಾಗುವುದಕ್ಕೆ ಮೊದಲು ಹೀಗೆ ಸಹ ಪ್ರಾರ್ಥಿಸಿದ್ದರು: ಓ ಅಲ್ಲಾಹ್, ನಿನ್ನ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ನನ್ನ ಸಲಾಮ್ ತಲಪಿಸಲು ನನಗೆ ಯಾವ ಮಾರ್ಗವೂ ಇಲ್ಲ. ಆದುದರಿಂದ ನೀನೇ ನನ್ನ ಸಲಾಮ್ ಅವರಿಗೆ ತಲಪಿಸು. ಹಝ್ರತ್ ಖುಬೈಬ್ ಹತ್ಯೆಗೊಳಿಸಲ್ಪಡಲು ಹಲಗೆಯ ಮೇಲೆ ಹತ್ತಿದಾಗ ಪುನಃ ಪ್ರಾರ್ಥಿಸಿದರು. **ಅಲ್ಲಾಹುಮ್ಮ ಅಹ್‌ಸಾಹುಮ್ ಅರದನ್ ವಖ್‌ತುಲ್‌ಹುಮ್ ಬದದನ್** ಇದರ ಅರ್ಥ ಹೀಗೆ: ಓ ಅಲ್ಲಾಹ್ ಅವರನ್ನು ಎಣಿಸಿ ಇಟ್ಟುಕೊಳ್ಳು. ಅವರನ್ನು ಆಯ್ಕೆ ಮಾಡಿ ಒಬ್ಬೊಬ್ಬರನ್ನಾಗಿ ವಧಿಸು. ಈ ಪ್ರಾರ್ಥನೆಯನ್ನು ಆಲಿಸಿದ ಒಬ್ಬ ಬಹುದೇವಾರಾಧಕ ಭಯಭೀತನಾಗಿ ನೆಲದಲ್ಲಿ ಮಲಗಿಬಿಟ್ಟನು. ಹೀಗೆ ಹೇಳಲಾಗುತ್ತಿದೆ: ಒಂದು ವರ್ಷ ದಾಟಿ ಹೋಗುವ ಮೊದಲೇ ಹಝ್ರತ್ ಖುಬೈಬರ ಹತ್ಯೆಯಲ್ಲಿ ಭಾಗವಹಿಸಿದವರಲ್ಲಿ ಯಾರೂ ಜೀವಂತರಾಗಿ ಉಳಿಯಲಿಲ್ಲ–ಭಯ ಭೀತಿಯಿಂದ ನೆಲಕ್ಕೆ ಬಿದ್ದು ಮಲಗಿದವನ ಹೊರತು ಎಲ್ಲರೂ ನಾಶಗೊಳಿಸಲ್ಪಟ್ಟರು. ಹಝ್ರತ್ ಜಿಬ್ರೀಲ್ ಅಲೈಹಿಸ್ಸಲಾಮ್ ಹಝ್ರತ್ ನಬಿ ಕರೀಮ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ಹಝ್ರತ್ ಖುಬೈಬರ ಬಗ್ಗೆ ಸಮಾಚಾರ ನೀಡಿದರು. ಸಹಾಬರು ಹೇಳುತ್ತಾರೆ: ಆ ದಿನ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕುಳಿತುಕೊಂಡಿದ್ದರು. ಅವರು ಹೇಳಿದರು: ವ ಅಲೈಕುಮುಸ್ಸಲಾಂ ಯಾ ಖುಬೈಬ್. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಖುರೈಶಿಗಳು ಖುಬೈಬರನ್ನು ಹತ್ಯೆ ಮಾಡಿದ್ದಾರೆ ಎಂದು.

(ಹುಝೂರ್ ಹೇಳಿದರು): ಈ ದಿನ ನಾನು ಒಂದು ಪ್ರಕಟನೆ ನೀಡಲು ಇಚ್ಛಿಸುತ್ತೇನೆ: ಶುಅಬ ತಾರೀಖೆ ಅಹ್ಮದಿಯ್ಯತ್ (ಅಹ್ಮದಿಯ್ಯತ್ತಿನ ಚರಿತ್ರೆ ವಿಭಾಗ) ತನ್ನ ಒಂದು ವೆಬ್‌ಸೈಟ್ ಪ್ರಾರಂಭಿಸಿದೆ. ಅದು ಉರ್ದು ಮತ್ತು ಇಂಗ್ಲಿಷ್ ಭಾಷೆಗಳಲ್ಲಿದೆ. ಇನ್‌ಶಾಅಲ್ಲಾಹ್ ಜುಮುಅದ ನಂತರ ನಾನು ಅದನ್ನು ಲಾಂಚ್ ಮಾಡುವೆನು.

ಒಂದು ದುಃಖಕರವಾದ ವಾರ್ತೆ ಇದೆ. ನಮ್ಮ ಒಬ್ಬ ಹಿರಿಯ ಮಿಶನರಿ ಸಫಿಯುರ್ರಹ್ಮಾನ್ ಖುರ್‌ಶೀದ್ ಸಾಹಿಬ್ ಸೆಪ್ಟಂಬರ್ ದಿನಾಂಕ 16ರಂದು 75ನೇ ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು – ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್. ಅವರ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿ ಹಝ್ರತ್ ಖುದ್‌ರತುಲ್ಲಾಹ್ ಸನ್‌ವರಿ ಸಾಹಿಬ್ ತಾಯಿಯ ಕಡೆಯಿಂದ ಅವರ ಅಜ್ಜ ಆಗಿದ್ದರು. ಅಲ್ಲಾಹನು ಅವರಿಗೆ ಮಗ್‌ಫಿರತ್, ರಹಮ್ ನೀಡಿ ಅವರ ಪದವಿ ಉನ್ನತಗೊಳಿಸಲಿ – ಆಮೀನ್.

*****

اَلْحَمْدُ لِلّٰهِ نَحْمَدُهٗ وَ نَسْتَعِيْنُهٗ وَ نَسْتَغْفِرُهٗ وَنُؤْمِنُ بِهٖ وَنَتَوَكَّلُ
عَلَيْهِ وَنَعُوْذُ بِاللّٰهِ مِنْ شُرُوْرِ اَنْفُسِنَا وَ مِنْ سَيِّئَاتِ اَعْمَالِنَا مَنْ
يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ فَلَا هَادِيَ لَهٗ - وَنَشْهَدُ اَنْ لَّا
اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ- عِبَادَ اللّٰهِ رَحِمَكُمُ
اللّٰهُ اِنَّ اللّٰهَ يَاْمُرُ بِالْعَدْلِ وَ الْاِحْسَانِ وَ اِيْتَاءِ ذِي الْقُرْبٰى وَ يَنْهٰى
عَنِ الْفَحْشَاءِ وَ الْمُنْكَرِ وَ الْبَغْيِ يَعِظُكُمْ لَعَلَّكُمْ تَذَكَّرُوْنَ
اُذْكُرُوا اللّٰهَ يَذْكُرْكُمْ وَ ادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ-

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London, UK. On 20-09-2019*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

**Email**: *khutuba.kannada@gmail.com*

**You can find all the Sermons archived at**: www.alislam.org/friday-sermon